## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 997 |
| ಉತ್ತರಿಸಬೇಕಾದ ದಿನಾಂಕ | : | 17-12-2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಲ್ಲಿ ಅಲ್ಪಸಂಖ್ಯಾತರ ಸಮುದಾಯದವರುಗಳಿಗೆ ಜಾಗೃತಿ ಮೂಡಿಸಲು ರೂಪಿಸಲಾದ ಯೋಜನೆಗಳಾವುವು: (ವಿವರ ನೀಡುವುದು) | ಸಹಕಾರ ಇಲಾಖೆಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ / ಹಿಂದುಳಿದ / ಅಲ್ಪಸಂಖ್ಯಾತ / ಅಲೆಮಾರಿ ಜನಾಂಗದ ವರ್ಗದವರನ್ನು / ಮಹಿಳೆಯರನ್ನು / ವಿಕಲಚೇತನರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ (ರಾಜ್ಯ ಯೋಜನೆ) ಮಂಜೂರಾತಿ ನೀಡುವ ಯೋಜನೆಯನ್ನು ಅನುಷ್ಟಾನಗೊಳಿಸಲಾಗುತ್ತಿದೆ.<br><br>ಈ ಯೋಜನೆಯನ್ವಯ ಅಲ್ಪಸಂಖ್ಯಾತ ಸಮುದಾಯದವರನ್ನು ಸಹ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನವನ್ನು ನೀಡಲಾಗುತ್ತಿದೆ. ಇದರಿಂದ ಅಲ್ಪಸಂಖ್ಯಾತರನ್ನು ಸಹಕಾರ ಕ್ಷೇತ್ರದ ಮುಖ್ಯವಾಹಿನಿಗೆ ತಂದು ಅವರುಗಳಿಗೆ ಸಹಕಾರ ಸಂಘಗಳಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಲು ಸಹಕಾರಿಯಾಗುತ್ತಿದೆ. |

| | | |
|---|---|---|
| ಆ) | ಸರ್ಕಾರವು ವಿವಿಧ ಸಂಸ್ಥೆ/ ಬ್ಯಾಂಕುಗಳಲ್ಲಿ ಅಲ್ಪಸಂಖ್ಯಾತರಿಗೆ ಷೇರು ಸಹಾಯಧನ ಹಾಗೂ ಷೇರು ಮೊತ್ತ ಹೆಚ್ಚಿಸುವ ಕುರಿತು ಕೈಗೊಂಡಿರುವ ಕ್ರಮಗಳೇನು? | ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಅಲ್ಪಸಂಖ್ಯಾತರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ಭರಿಸುವ ಯೋಜನೆ ಯಡಿಯಲ್ಲಿ ಸಹಕಾರ ಸಂಘದ ಷೇರು ಮೊತ್ತ ಅಥವಾ ಗರಿಷ್ಠ ರೂ.500/-ಗಳ ಷೇರು ಮೊತ್ತವನ್ನು ಸರ್ಕಾರದಿಂದ ನೀಡಲಾಗುತ್ತದೆ.<br><br>ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನದ ವಿವರ ಈ ಕೆಳಕಂಡಂತೆ ಇರುತ್ತದೆ. |

| ವರ್ಷ | ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ) | ಅಲ್ಪಸಂಖ್ಯಾತರ ಸಂಖ್ಯೆ |
|---|---|---|
| 2021-22 | 32.64 | 7033 |
| 2022-23 | 10.93 | 2286 |
| 2023-24 | 9.50 | 1996 |

**ಸಂಖ್ಯೆ: ಸಿಒ 306 ಸಿಎಲ್‌ಎಸ್ 2024**

(ಕೆ.ಎನ್.ರಾಜಣ್ಣ)
ಸಹಕಾರ ಸಚಿವರು